ಫ್ಯಾಕ್ಸ್ : 080 – 2202 8041

ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ಸಂಖ್ಯೆ : ವಾಇ : ಉ ನಿ : ಸುಮಪ : 2015-16 :

ಜುಲೈ 17, 2015

## ಈದ್-ಉಲ್-ಫಿತರ್ : ರಾಜ್ಯದ ಜನತೆಗೆ ಮುಖ್ಯಮಂತ್ರಿ ಶುಭಾಶಯ

**ಬೆಂಗಳೂರು, ಜುಲೈ 17:**

ರಂಜಾನ್ ಹಬ್ಬ ಎಂದೇ ಜನಪ್ರಿಯವಾದ ಈದ್-ಉಲ್-ಫಿತರ್ ಹಬ್ಬದ ಸಂದರ್ಭದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ರಾಜ್ಯದ ಎಲ್ಲಾ ಜನತೆಗೆ, ವಿಶೇಷವಾಗಿ ನಾಡಿನ ಮುಸಲ್ಮಾನ ಬಾಂಧವರಿಗೆ, ಶುಭ ಹಾರೈಸಿದ್ದಾರೆ.

ಧರ್ಮನಿಷ್ಠ ತತ್ವ ಹಾಗೂ ಸಿದ್ಧಾಂತಗಳ ಪರಿಪಾಲನೆ ಮಾತ್ರವಲ್ಲದೆ, ಮಾಸವಿಡೀ ಸಾಂಪ್ರದಾಯಿಕ ವಿಶೇಷ ಪ್ರಾರ್ಥನೆ ಹಾಗೂ ಉಪವಾಸ ಆಚರಣೆಗಳೊಂದಿಗೆ ಮನಃಶುದ್ಧಿ ಹಾಗೂ ದೇಹ ಶುದ್ಧಿಗೆ ಒತ್ತು ನೀಡುವ ರಂಜಾನ್ ಹಬ್ಬವು ನಾಡಿನ ಎಲ್ಲಾ ಮುಸಲ್ಮಾನ ಬಾಂಧವರಲ್ಲಿ ಉಲ್ಲಾಸ ಮತ್ತು ಉತ್ಸಾಹವನ್ನು ಚಿಮ್ಮಿಸಲಿ. ಅಲ್ಲದೆ, ಭಾವನಾತ್ಮಕ ಸಂಬಂಧಗಳ ಜೊತೆ ಜೊತೆಗೆ ಭಾವೈಕ್ಯತೆಯನ್ನೂ ಮೂಡಿಸಲು ಪ್ರೇರಣೆ ನೀಡಲಿ ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

*********

ಡಿ ಪಿ ಎಂ